ಕಬ್ಬಿಣದ ಗುಂಡಾಗಿದ್ದರೂ, ಸುತ್ತಲಿರುವವರು ಅವಳನ್ನು 'ತ್ಯಾಗಮಯಿ' ಎಂದು ಕರೆಯುತ್ತಾ ಹೊನ್ನಶೂಲಕ್ಕೆ ಇಕ್ಕುತ್ತಾರೆ. ಒಂಟಿತನ ಬದಿಗೆ ಸರಿಯುತ್ತದೆ. ಕೆಲಸವಿಲ್ಲದ ತಂದೆ, ಕೆಲಸಕ್ಕೆ ಹೋಗದೆ ಪೋಕರಿಯಾಗಿರುವ ಅಣ್ಣನೋ, ತಮ್ಮನೋ, ಮದುವೆಗೆ ಸಿದ್ಧರಾಗುತ್ತಿರುವ ತಂಗಿಯರು – ಇವರೆಲ್ಲರನ್ನೂ ನೋಡಿಕೊಳ್ಳುತ್ತಾ, ತಾನು 'ಎಂದೂ ಮುಗಿಯದ ಧಾರಾವಾಹಿ'ಯೇ ಆಗಿಬಿಡುತ್ತಾಳೆ!

ಇದು ಓದಿರುವ ಹೆಣ್ಣಿನ ಕತೆಯಾದರೆ, ಅನಕ್ಷರಸ್ಥ ಒಂಟಿ ಹೆಣ್ಣಿನ ಕಷ್ಟಕೋಟಲೆಗಳನ್ನು ವಿವರಿಸಲಾಗದು! ಅವಳ ಪರಾವಲಂಬನೆ ಅನೇಕ ಸಮಸ್ಯೆಗಳನ್ನು ಅವಳ ಮುಂದೆ ತಂದಿಟ್ಟು, ಕೊನೆಗೆ ಅವಳು ಕೆರೆಗೋ ಬಾವಿಗೋ ಹಗ್ಗಕ್ಕೋ ಬಲಿಯಾಗುವುದನ್ನು ನೋಡುತ್ತೇವೆ. ಅವಳಿಗೆ ಕಾನೂನಿನ ಅರಿವಂತೂ ಇಲ್ಲ. ಹಾಗಾಗಿ ಇತರರು ತನ್ನ ಆಸ್ತಿಯನ್ನು ಅನುಭವಿಸುತ್ತಿದ್ದರೂ ಅವರೆದುರು ಸೆಟೆದು ನಿಲ್ಲಲು ಅವಳಲ್ಲಿ ಕಸುವಿಲ್ಲ, ತಿಳಿವಿಲ್ಲ. ಜೀವವನ್ನು ಹೊಸಕಿ ಹಾಕದೆ ಪಾಪ, ಇನ್ನೇನು ಮಾಡುತ್ತಾಳೆ?

ಇನ್ನೂ ಕೆಲವರಲ್ಲಿ ದಿಟ್ಟತನವಿದೆ, ವಿದ್ಯೆಯಿದೆ, ಒಳ್ಳೇ ಕೆಲಸವಿದೆ. ಸ್ವತಂತ್ರವಾಗಿ ಬೇರೆ ಮನೆ ಹಿಡಿದು ಅಥವಾ ಪೇಯಿಂಗ್ ಗೆಸ್ಟಾಗಿ ಇಲ್ಲವೇ ಹಾಸ್ಟೆಲಿನಲ್ಲಿದ್ದು 'ಸುಖ'ದ ದಿನಗಳನ್ನು ಕಳೆಯುತ್ತಾರೆ. ಆದರೆ, ಇವರಲ್ಲಿಯೂ ಖಿನ್ನತೆಗಳು, ಕಹಿ ಗಳಿಗೆಗಳು ಧುತ್ತನೆ ಏಳುತ್ತವೆ. ಮೇಲೆ ಸುತ್ತ ತಿರುಗುವ 'ಹದ್ದು'ಗಳನ್ನು ನಿಭಾಯಿಸುವ ಚಾಕಚಕ್ಯತೆ ಎಲ್ಲರಲ್ಲೂ ಇರುವುದಿಲ್ಲ.

ಹೌದು, ಹೆಣ್ಣು ಮದುವೆಯಾಗಲೇಬೇಕು ಎನ್ನುವ ಧೋರಣೆ ಮನುವಿನ ನಂತರವೇ ಬಂದಿರಬೇಕು. 'ಮದುವೆ ಎಷ್ಟೇ ಮಧುರ ಬಂಧನವಾದರೂ ಹೊಂದಾಣಿಕೆ ಇಲ್ಲದೆ ಜೋಡಿಯಾಗಿಯೇ ಉಳಿಯುವುದಕ್ಕಿಂತ ಒಂಟಿಯಾಗಿ ಬಾಳುವುದೇ ಮೇಲು' ಎಂದು ದಿಟ್ಟತನದಿಂದ ಮುಂದಿನ ಹೆಜ್ಜೆಗಳನ್ನು ಬಿರುಸಾಗಿ ಇಡುವವರಿದ್ದಾರೆ. ಇವರನ್ನು ನೋಡಿದಾಗ 'ಬಿಟ್ಟಾಡಿಕೊಳುವ ಬಾಗಾದಿ ಮನೆ ಮುಂದೆ ಬಿಚ್ಚುಕತ್ತಾಗಿ ಹೊಳೆದೇನ' ಎಂದು ಹಾಡಿದ ಗ್ರಾಮೀಣ ಹೆಣ್ಣಿನ ನೆನಪು ಬರುತ್ತದೆ.

'ಖಾಲಿಗೂಡು ಖಿನ್ನತೆ' (**Empty Nest Syndrome**) ಎನ್ನುವ ಶಬ್ದವೊಂದಿದೆ. ಇಲ್ಲಿ, ಗೂಡಿನಿಂದ ಮರಿಹಕ್ಕಿಗಳು ರೆಕ್ಕೆ ಬಲಿತು ಹಾರಿಹೋಗಿವೆ. ಆಗ ಈ ಬಗೆಯ ಖಿನ್ನತೆ ಪ್ರೌಢ ಹೆಣ್ಣನ್ನು ಕಾಡುವುದುಂಟು. ಫೋನಿನಲ್ಲಿ ಮಾತಾಡುತ್ತಾರೆ, ಸ್ಕೈಪ್‌ನಲ್ಲಿ ನೋಡುತ್ತಾರೆ, ಸಂಭಾಷಣೆ ಸಂತೋಷವಾಗಿಯೇ ಜರುಗುತ್ತದೆ. ಆಗಾಗ ಮಗಳ ಮನೆಗೆ ಹೋಗುವುದುಂಟು. ಆದರೆ ವಾಪಸು ಬಂದಾಗ ಒಂಟಿತನವೇ ಗ್ಯಾರಂಟಿ. ಹಳೆಯ ಆಲ್ಬಂಗಳನ್ನು ಮುಂದಿಟ್ಟುಕೊಂಡು ಕಳೆದುಹೋದ ದಿನಗಳನ್ನು ಮೆಲುಕು ಹಾಕುತ್ತಾ ಕೂರುವುದರಲ್ಲೇ ಸ್ವಲ್ಪ ಶಮನ. ಕಣ್ಣೀರೂ ಬಸಿಯಬಹುದು.

ಹೀಗಿರುವಾಗ ಒಂಟಿ ಹೆಣ್ಣು ಸಂತೋಷವಾಗಿರಲು ನಾವು ಮಾಡಬಹುದಾದದ್ದು ಏನಿದೆ? ಈ ನಿಟ್ಟಿನಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಬಹುದು:

★ ಪ್ರತಿ ಹೆಣ್ಣೂ ಕನಿಷ್ಠ ಪಿ.ಯು.ಸಿ ಯನ್ನಾದರೂ ಮಾಡಿರಬೇಕು. ಕೆಲವೊಮ್ಮೆ ಗಂಡನನ್ನು ಕಳೆದುಕೊಂಡಾಗ ಹೆಣ್ಣು ಕಂಗಾಲಾಗುತ್ತಾಳೆ. ತಾನು ಓದಿಲ್ಲದೆ, ಸದಾ ಇತರರ ನೆರಳಲ್ಲೇ ಇದ್ದು, ಹೊಸಲನ್ನೂ ದಾಟದ ಹೆಣ್ಣಿಗೆ ದಿಕ್ಕೇ ತೋಚುವುದಿಲ್ಲ!

★ ತಕ್ಕಮಟ್ಟಿಗಾದರೂ ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಇರಬೇಕು. ಉನ್ನತ ಕೆಲಸದಲ್ಲಿರುವ ಹೆಣ್ಣಿನಿಂದ ಸಂಬಳವನ್ನೆಲ್ಲ ಕಿತ್ತುಕೊಂಡು, ಅವಳ ಬಸ್ಸಿಗೆ ಮಾತ್ರ ಬೇಕಾಗುವ ಪುಡಿ ಕಾಸನ್ನು ನೀಡುವ ಕುಟುಂಬಗಳಿವೆಯಲ್ಲ, ಅಂಥವುಗಳನ್ನು ನಾವು ಎಲ್ಲೂ ಕಾಣಬಾರದು. ಅವಳ ಕೈಯಲ್ಲಿ ಅವಳದೇ ಆದ, ಅವಳು ತನ್ನ ಇಷ್ಟದಂತೆಯೇ ಖರ್ಚು ಮಾಡಬಹುದಾದ ಹಣವಿದ್ದಾಗ ಮಾತ್ರ ಹೆಣ್ಣು, ತಲೆ ಎತ್ತಿಕೊಂಡು ನಡೆಯಬಲ್ಲಳು, ನೆನಪಿರಲಿ.

★ ಹೆಣ್ಣಿಗೆ ಪ್ರಸಕ್ತ ಕಾನೂನಿನ ಅರಿವು ಇರಲೇಬೇಕು. ಶಾಲಾ ಪುಸ್ತಕಗಳಲ್ಲಿ ಈ ವಿಷಯವನ್ನು ಕಡ್ಡಾಯವಾಗಿ ಸೇರಿಸಬೇಕು. ಸರ್ಕಾರವು, ಹೆಣ್ಣಿನ ಪರವಾಗಿ ಸಾಕಷ್ಟು ನಿಯಮ, ನಿಬಂಧನೆಗಳನ್ನು ಹೊರತಂದಿದೆ. ಆದರೆ, ಅದರ ಅರಿವು ಎಷ್ಟು ಮಹಿಳೆಯರಲ್ಲಿದೆ?

★ ಈಗೀಗ ಹೆಣ್ಣು ಹೆಚ್ಚು ಓದುತ್ತಿರುವುದರಿಂದ ಪೋಷಕರು ಅವಳಿಗಿಂತ ಹೆಚ್ಚು ಓದಿರುವ ಗಂಡನ್ನೇ ಹುಡುಕುತ್ತಾರೆ. ಇದರ ಅಗತ್ಯವಿಲ್ಲ. ವಿದ್ಯೆ, ಆದಾಯ ಎರಡರಲ್ಲೂ ಗಂಡನಿಗಿಂತ ಮೇಲಿದ್ದರೂ ಗಂಡ, ಹೆಂಡಿರಲ್ಲಿ ತುಂಬಾ ಅನ್ಯೋನ್ಯತೆ ಇದ್ದು, ಅವರು ಸುಖವಾಗಿರುವುದನ್ನು ನಾವು ಕಂಡಿಲ್ಲವೇ? ಇಲ್ಲಿ, ಅಹಂ ಅಡ್ಡಬರಬಾರದು.

★ ಹಾಗೆಯೇ, ವಯಸ್ಸು ಕೂಡ. ನಮ್ಮಲ್ಲಿ ಗಂಡಿನ ವಯಸ್ಸು ಹೆಣ್ಣಿನ ವಯಸ್ಸಿಗಿಂತ ನಾಲ್ಕೈದು ವರ್ಷಗಳಾದರೂ ಹೆಚ್ಚಾಗಿರಬೇಕೆಂಬ ಸಂಪ್ರದಾಯವಿದೆ. ಆದರೆ, ಗಾಂಧೀಜಿಯವರಿಗಿಂತ ಕಸ್ತೂರಿ ಬಾ ದೊಡ್ಡವರು. ಸಚಿನ್ ತೆಂಡೂಲ್ಕರ್‌ಗಿಂತ ಅವರ ಪತ್ನಿ ಡಾ.ಅಂಜಲಿ, ವಯಸ್ಸಿನಲ್ಲಿಯೂ ವಿದ್ಯೆಯಲ್ಲಿಯೂ ಮುಂದಿರುವವರು. ಹೀಗೆ, ಅನೇಕ ಉದಾಹರಣೆಗಳಲ್ಲಿ, ಆ ಕುಟುಂಬಗಳು ತುಂಬಾ ಸಂತೋಷವಾಗಿರುವುದನ್ನು ಗಮನಿಸುತ್ತೇವೆ. ಹೌದು, ಸಂಗಾತಿಯನ್ನು ಹುಡುಕುವಾಗ ವಯಸ್ಸಾಗಲೀ, ವಿದ್ಯೆಯಾಗಲೀ ಆದಾಯವಾಗಲೀ ಅಡ್ಡ ಬರಬಾರದು.

★ ಉತ್ತಮ ಹವ್ಯಾಸಗಳಿದ್ದಾಗ, ಒಂಟಿತನ ಅಷ್ಟಾಗಿ ಕಾಡುವುದಿಲ್ಲ. ಓದುವುದು, ಬರೆಯುವುದು, ಯಾವುದೇ ವಸ್ತುವನ್ನು ಶೇಖರಿಸುವುದು, ಡ್ರಾಯಿಂಗ್, ಪೇಂಟಿಂಗ್, ತೋಟಗಾರಿಕೆ. ವಿವಿಧ ಕೈಕೆಲಸಗಳು, ಫೋಟೋಗ್ರಫಿ, ಪ್ರವಾಸ.. ಒಳ್ಳೆ ಹಾಬಿ ಇದ್ದಾಗ ಮನಸ್ಸು ಉಲ್ಲಸಿತವಾಗಿ, ಖಿನ್ನತೆ ಮಾಯವಾಗುತ್ತದೆ.

★ ಪ್ರೌಢ ವಯಸ್ಸಿನ ಹೆಣ್ಣು 'ಖಾಲಿ ಗೂಡಿನ ಖಿನ್ನತೆ'ಯಲ್ಲಿ ಬಳಲುವುದಕ್ಕಿಂತ ಒಳ್ಳೆಯ ಸಂಘ, ಸಂಸ್ಥೆಗಳಿಗೆ ಸದಸ್ಯರಾಗುವುದು ಆರೋಗ್ಯಕರ. ಅಲ್ಲಿನ ವಿಚಾರ ವಿನಿಮಯ, ಹೊಸ ಹೊಸ ವಿಷಯಗಳ ಮಂಡನೆ, ಸ್ನೇಹಿತರು ಒಂಟಿತನಕ್ಕೆ ಸವಾಲಾಗಿ ನಿಂತು ಸಮಾಧಾನ, ತೃಪ್ತಿಗಳಿಗೆ ಕಾರಣರಾಗುತ್ತಾರೆ.

★ ವಯಸ್ಸು ಮೀರಿದ ಸ್ತ್ರೀಯರಿಗೆ ವೃದ್ಧಾಶ್ರಮಗಳಿವೆ. ಅವರನ್ನು ದತ್ತು ತೆಗೆದುಕೊಳ್ಳುವ ಪರಿಪಾಠವೂ ಅಲ್ಲಲ್ಲಿ ಕಾಣುತ್ತಿದೆ.

★ ಇನ್ನು, ಒಂಟಿ ಹೆಣ್ಣಿಗೆ ಲೈಂಗಿಕ ಕಾಮನೆಗಳು ಇರುವುದಿಲ್ಲವೇ? ಖಂಡಿತ ಇರುತ್ತವೆ. ಮೇಲೆ ಹೇಳಿರುವ ದಾರಿಗಳು ಇಂತಹ ಭಾವನೆಗಳನ್ನು ಉದಾತ್ತಗೊಳಿಸುತ್ತವೆ. ಬರೀ ಲೈಂಗಿಕ ತೃಪ್ತಿಗಾಗಿ ಗಂಡಿನ ಹಿಂದೆ ಓಡುವುದಕ್ಕಿಂತ ಹಸ್ತಮೈಥುನವೇ ಲೇಸು ಎಂದು ಭಾವಿಸುವ ಹೆಣ್ಣುಗಳೂ ಇದ್ದಾರೆ. ಅದರಲ್ಲೇನೂ ಬಾಧಕವಿಲ್ಲ.

★ ಹೆಣ್ಣು, ಬರೀ ತ್ಯಾಗಮಯಿಯಾದರೆ ಸಾಲದು. ಸಹಾಯ ಮಾಡುವಷ್ಟು ಮಾಡಿ, ಅವಳು ತನ್ನ ಭವಿಷ್ಯದ ಬಗ್ಗೆಯೂ ಚಿಂತನೆ ಮಾಡುವುದು ಒಳ್ಳೆಯದು. ತ್ಯಾಗಕ್ಕೆ ಮಿತಿಯಿರಲಿ.

★ ಒಂಟಿ ಹೆಣ್ಣಿಗೂ ತಾಯ್ತನದ ಬಯಕೆಗಳು ಇರಬಹುದಲ್ಲವೇ? ಹಾಗಿದ್ದಾಗ, ಆ ಸುಪ್ತ ಆಸೆಯನ್ನು ತಣಿಸಿಕೊಳ್ಳಲು ಮಗುವೊಂದನ್ನು ದತ್ತು ತೆಗೆದುಕೊಳ್ಳುವ ನಿರ್ಧಾರವನ್ನು ಅನೇಕರು ಮಾಡುತ್ತಿದ್ದಾರೆ. ಇಂಥವರಿಗೆ ಒತ್ತಾಸೆಯಾಗಿ ಸಾಕಷ್ಟು ಸಂಘ ಸಂಸ್ಥೆಗಳೂ ಇವೆ. ಕಾನೂನೂ ಸಹಾಯಕವಾಗಿದೆ.

★ ಒಂಟಿ ಹೆಣ್ಣಿನ ಬಗ್ಗೆ ನಮ್ಮ ಸಮಾಜಕ್ಕಿರುವ ಧೋರಣೆ ಆದಷ್ಟು ಬೇಗ ಬದಲಾಗಬೇಕಾಗಿದೆ. ಅವಳು ತನ್ನ ಸ್ವಂತ ಅಣ್ಣನ ಜೊತೆಗೆ ಓಡಾಡುತ್ತಿದ್ದರೂ ಕೊಂಕುದೃಷ್ಟಿಯಿಂದ ನೋಡುವವರು ನಾವು. ಅವಿವಾಹಿತ ಹಾಗೂ ವಿಚ್ಛೇದಿತ ಹೆಣ್ಣುಗಳು ಬಹು ಬೇಗ ವದಂತಿಗಳಿಗೆ ಗ್ರಾಸವಾಗುತ್ತಾರೆ. 'ಅವಳು ಹಾಗೆ', 'ಇವಳು ಹೀಗೆ', 'ಅವಳು ಇವಳಿಗೆ ಲಿಫ್ಟ್ ಕೊಟ್ಟಿದ್ದನ್ನು ನೋಡಿದೀರಾ' ಹೀಗೆಲ್ಲಾ ನಾಲಗೆ ಸಡಿಲ ಬಿಡುವ ಪರಿಪಾಠ ನಮ್ಮಿಂದ ತೊಲಗಬೇಕು.

★ 'ಕುಂಬಳಕಾಯಿ ಕತ್ತಿ ಮೇಲೆ ಬಿದ್ದರೂ ಒಂದೇ, ಕತ್ತಿ ಕುಂಬಳಕಾಯಿ ಮೇಲೆ ಬಿದ್ದರೂ ಒಂದೇ, ಹೋಳಾಗುವುದು ಕುಂಬಳಕಾಯಿಯೇ' ಎಂದೂ, 'ಬಟ್ಟೆ ಬೇಲಿ ಮೇಲೆ ಬಿದ್ದರೂ ಹರಿಯುವುದು ಬಟ್ಟೆಯೇ' ಎಂದೂ ಹೇಳಿ, ಗಂಡನ್ನು ಸಲೀಸಾಗಿ ಬಿಟ್ಟುಬಿಡುವ ಧೋರಣೆಯು ಎಷ್ಟೋ ಹೆಣ್ಣುಮಕ್ಕಳ ಬಾಳನ್ನು ಮುಕ್ಕಾಗಿಸಿದೆ.

★ ವಯಸ್ಸು ಏರುತ್ತಿದ್ದರೂ ಸಂಗಾತಿಯನ್ನು ಹುಡುಕಿ, ಮದುವೆ ಆಗದಾಗ, ಅಂತರ್ಜಾಲದ ಸಹಾಯ ಪಡೆಯುವುದು ತಪ್ಪಲ್ಲ. ಆದರೆ, ಆ ಗಂಡಿನ ಹಿನ್ನೆಲೆಯನ್ನು ಸವಿವರವಾಗಿ ವಿಚಾರಿಸುವುದು ಮುಖ್ಯ.

ಒಟ್ಟಾರೆ, ಒಂಟಿಹೆಣ್ಣು ತನ್ನ ಕಾಲ ಮೇಲೆ ಗಟ್ಟಿಯಾಗಿ ನಿಲ್ಲುವಂತೆ, ನಾವು ಅವಳಿಗೆ ಸಹೃದಯತೆಯಿಂದ ದಾರಿ ಮಾಡಿಕೊಡಬೇಕು.

ಇಂಗ್ಲೆಂಡಿನಲ್ಲಿ ಒಂಟಿತನದ ಸಮಸ್ಯೆಗಳಿಗೆ ಎಷ್ಟು ಪ್ರಾಮುಖ್ಯತೆ ನೀಡಿದ್ದಾರೆಂದರೆ, ಈ ವಿಷಯದಲ್ಲಿ ನೆರವಾಗಲೆಂದೇ ಸರ್ಕಾರ ಒಬ್ಬ ಮಂತ್ರಿಯನ್ನೂ ನೇಮಿಸಿದೆ! ●